**ಹಿರಿಯ ಶ್ರೇಣಿ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

**CC No.115/2019**

**PW-2 CW-4**

| | | |
|---|---|---|
| ಸಾಕ್ಷಿದಾರನ ಹೆಸರು | : | ರಾಜು ತಂದೆ ದುರುಗಪ್ಪ |
| ವಯಸ್ಸು | : | 24 ವರ್ಷ |
| ಉದ್ಯೋಗ | : | ಜೆಇ ಸಹಾಯಕ |
| ವಾಸಸ್ಥಳ | : | ಚಿಂಚೋಡಿ |
| ಪ್ರಮಾಣಿಕರಿಸಿದ ದಿನಾಂಕ | : | 29-09-2023 |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ನನಗೆ ಆರೋಪಿತರ ಪರಿಚಯ ಇದೆ. ನನಗೆ ಚಾಸಾ-1 ರಿಂದ 3, 5 ರಿಂದ 10 ರವರ ಪರಿಚಯವಿದೆ. ದಿನಾಂಕ 25-04-2019 ರಂದು ಲಿಂಗದಹಳ್ಳಿಯ ಪರಮೇಶ ಮತ್ತು ಚಂದ್ರಾಮಪ್ಪ ಇವರ ಜಮೀನಿನಲ್ಲಿ ಸ್ಥಳ ಪರಿಶೀಲನೆಗಾಗಿ ನಾನು ಮತ್ತು ಚಾಸಾ-1 ರವರು ಹೋಗಿದ್ದೆವು. ಆಗ ಆರೋಪಿತರು ಸ್ಥಳಕ್ಕೆ ಬಂದು ಚಾಸಾ-1 ರವರಿಗೆ ಹೊಡೆದಿರುತ್ತಾರೆ. 1 ನೇ ಆರೋಪಿ ಚಾಸಾ-1 ರವರಿಗೆ ಬಡಿಗೆಯಿಂದ ಹೊಡೆದಿರುತ್ತಾರೆ. ಆರೋಪಿ ಚಾಸಾ-1 ರವರಿಗೆ ಚಪ್ಪಲಿಯಿಂದ ಹೊಡೆದಿರುತ್ತಾರೆ. ನಂತರ ನಾನು ಸ್ಥಳದಿಂದ ನನಗೂ ಹೊಡೆಯುತ್ತಾರೆಂದು ಓಡಿ ಹೋಗಿರುತ್ತೇನೆ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ಸಾಕ್ಷಿ ಈಗ ನ್ಯಾಯಾಲಯದ ಮುಂದಿರುವ ಒಂದು ಬಡಿಗೆ ಹಾಗೂ ಚಪ್ಪಲಿಯನ್ನು ನೋಡಿ ಗುರುತಿಸಿದ್ದು ಅದರಿಂದಲೇ ಚಾಸಾ-1 ರವರನ್ನು ಹೊಡೆದಿರುವುದಾಗಿ ಹೇಳಿದ್ದು ಅವುಗಳನ್ನು ಈಗಾಗಲೇ ಮುದ್ದೆಮಾಲು-1 ಮತ್ತು 2 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ 2 ರಿಂದ 4 ನೇ ಆರೋಪಿತರ ಪರ ಶ್ರೀ ಎ.ಎಮ್.ಪಿ ವಕೀಲರಿಂದ.**

ನನಗೆ ಈಗ ವಯಸ್ಸು 28 ವರ್ಷ ಇರುತ್ತದೆ. ಈ ಘಟನೆ ಆದಾಗ ನಮ್ಮ ಜೆಇ ಅರುಣ ಎಂದು ಇದ್ದರು. ಈಗ ನನ್ನ ಜೆಇ ಅನಂತರಡ್ಡಿ ಯವರು ಇರುತ್ತಾರೆ. ಜೆಇ ಯವರ ಸಹಾಯಕನಾಗಿ ಕೆಲಸ ಮಾಡಲು ನನಗೆ ಆದೇಶ ಕೊಟ್ಟಿರುತ್ತಾರೆ. ಆದೇಶದ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ದಿನಾಂಕ 25-04-2019 ರಂದು ಲಿಂಗದಹಳ್ಳಿಗೆ ಹೋಗಲು ನನಗೆ ಪಿಡಿಓ ರವರು ಹೇಳಿದ್ದರು. ಈ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ. ಜಿಪಿಎಸ್ ಕೆಲಸ ಮುಗಿದ ನಂತರ ಜೆಇ ರವರು ಕೆಲಸ ನೋಡಲು ಹೋಗುತ್ತಾರೆ. ಜಿಪಿಎಸ್ ಕೆಲಸ ನೋಡಲು ಜೆಇ ರವರು ಹೋಗಿಲ್ಲ ಕಾರಣ ನಮಗೆ ಕೆಲಸ ಮಾಡಲು ಬಿಟ್ಟಿರುವುದಿಲ್ಲ ಎಂದು ಹೇಳುತ್ತಾರೆ. ಈ ಬಗ್ಗೆ ತಾಲೂಕು ಪಂಚಾಯತಿಯವರಿಗೆ ಪತ್ರದ ಮೂಲಕ ತಿಳಿಸಿರುವುದಿಲ್ಲ. ಯಾವುದೇ ಒಂದು ಕಾಮಗಾರಿ ಮಾಡಲು ತಾಲೂಕು ಪಂಚಾಯತಿಯವರು ಪರವಾನಿಗೆ ಕೊಡಬೇಕಾಗುತ್ತದೆ ಎಂದರೆ ನಿಜ. ಈ ಪ್ರಕರಣದ ಕೆಲಸ ಮಾಡಲು ತಾಲೂಕು ಪಂಚಾಯತಿಯವರು ಪರವಾನಿಗೆ ಕೊಟ್ಟಿದ್ದರು. ಆ ಪರವಾನಿಗೆಯನ್ನು ಪಡೆದು ಕೆಲಸ ಎಲ್ಲಿ

ಮಾಡುವುದು ಇದೆ ಎಂದು ಜಿಪಿಎಸ್ ಮಾಡಲು ನಾವು ಹೋಗಬೇಕಾಗುತ್ತದೆ ಎಂದರೆ ನಿಜ. ಆ ಪರವಾನಿಗೆಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ. ಲಿಂಗದಹಳ್ಳಿಗೆ ನಾನೊಬ್ಬನೇ ಹೋಗಿದ್ದೆ. ಲಿಂಗದಹಳ್ಳಿಗೆ ನಾನು ಮತ್ತು ಮೇಟಿ ಹೋಗಿದ್ದು ಮೇಟಿಯನ್ನು ನಾನೇ ನೇಮಕ ಮಾಡಿರುತ್ತೇನೆ. ಈ ಪ್ರಕರಣದ ಕೆಲಸ ಬದು ನಿರ್ಮಾಣ ಇದ್ದು ಅದನ್ನು ಚಂದ್ರಾಮ ರವರ ಜಮೀನಿನಲ್ಲಿ ಮಾಡಬೇಕಾಗಿರುತ್ತದೆ. ಚಂದ್ರಾಮ ರವರ ಜಮೀನಿನ ಸರ್ವೆ ನಂಬರ ನೆನಪಿಲ್ಲ. ಒಂದು ಜಮೀನಿನಲ್ಲಿ ಯಾವುದೇ ಕೆಲಸ ಆಗಿರದೇ ಇದ್ದರೆ ಬದು ನಿರ್ಮಾಣದ ಕೆಲಸ ಮಾಡಬಹುದು. ಸ್ಥಳಕ್ಕೆ ಹೋದಾಗ ಆರೋಪಿತರು ಅಲ್ಲಿಗೆ ಬಂದಿದ್ದರು. ಆರೋಪಿತರು ಹಾಗೂ ಚಾಸಾ-1 ರವರು ಹೊಡೆದಾಡಿರುತ್ತಾರೆ. ಈ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ಘಟನೆಯಾದ ವಿಷಯವನ್ನು ಪಿಡಿಓ ರವರಿಗೆ ಹೇಳಿರುತ್ತೇನೆ. ಈ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ಈ ಮಾತನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯಾದ ಸ್ಥಳದ ಚೆಕ್ಕಂದಿ ಗೊತ್ತಿಲ್ಲ. ನಾನು ಹಾಗೂ ಚಾಸಾ-1 ರವರು ಉದ್ಯೋಗ ಖಾತ್ರಿ ಯೋಜನೆ ಅಡಿ ಕೂಲಿ ಕಾರ್ಮಿಕರಿಗೆ ಜಮಾ ಆದ ಹಣವನ್ನು ದುರುಪಯೋಗಪಡಿಸಿಕೊಳ್ಳುತ್ತೇನೆ ಎಂದರೆ ಸರಿಯಲ್ಲ. ನಾನು ಹಾಗೂ ಚಾಸಾ-1 ರವರು ಪಂಚಾಯತಿಯಲ್ಲಿ ಕೆಲಸ ಮಾಡುತ್ತೇವೆ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ 1 ಹಾಗೂ 2ನೇ ಆರೋಪಿತರು ಬಡಿಗೆಯಿಂದ ಹೊಡೆದಿರುತ್ತಾರೆ. ಚಾಸಾ-1 ರವರಿಗೆ ಹಣೆಗೆ ಮತ್ತು ಕೈಗೆ ಹೊಡೆದಿದ್ದರು. ನಂತರ ನಾನು ಬಂದಿರುತ್ತೇನೆ. ಮುದ್ದೆಮಾಲು-1 ಮತ್ತು 2 ಘಟನೆ ನಡೆದ ಸ್ಥಳದಲ್ಲಿದ್ದು ಅವುಗಳನ್ನು ಯಾರು ತಂದಿದ್ದರು ಗೊತ್ತಿಲ್ಲ. ಮುದ್ದೆಮಾಲು-1 ಮತ್ತು 2 ರಂತಹವುಗಳು ಎಲ್ಲಾ ಕಡೆ ಸಿಗುತ್ತವೆ ಎಂದರೆ ನಿಜ. ಘಟನೆಯಾದ ಮರುದಿನ ನಾನು ಪೊಲೀಸ ಠಾಣೆಗೆ ಹೋಗಿರುತ್ತೇನೆ. ನಾನು ದಿನಾಂಕ 26-04-2019 ರಂದು ಪೊಲೀಸ ಠಾಣೆಗೆ ಹೋಗಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.